ಹೊಂದಿಕೆಯಾಗುವ ಹಾಗೆ ಇಲ್ಲವೇ ಇಲ್ಲ. ಆದರೆ ದಕ್ಷಾ, ಇದೆಲ್ಲದಕ್ಕಿಂತ ಮಿಗಿಲಾಗಿ ನಿನ್ನಪ್ಪನನ್ನು ಬಿಟ್ಟು ಬದುಕುವೆನೆಂಬ ಭರವಸೆಯೇ ಇಲ್ಲ ನನಗೆ. ನಿನ್ನಣ್ಣನಿಗೆ ಇದನ್ನೆಲ್ಲಾ ತಿಳಿಸಿ ಹೇಳಿದರೂ ಅವನದೇ ಲೆಕ್ಕಾಚಾರ ತೆಗೆಯುತ್ತಾನೆ. ದೇಹಬಾಧೆಯನ್ನೂ ಮೀರಿ ಯೌವನದಲ್ಲಿ ಉಕ್ಕದ ಪ್ರೀತಿ ಈಗ ಅಪ್ಪನ ಮೇಲೆ ಉಕ್ಕುತ್ತಿರುವುದು ಹುಚ್ಚಲ್ಲವೇ ಎಂದು ಕೇಳಿದ. ಅಪ್ಪನಿಗೆ ಹೆಂಡತಿಯ ಅವಶ್ಯಕತೆ ಎಷ್ಟಿದೆಯೋ ಅದಕ್ಕೂ ಹೆಚ್ಚಾಗಿ ತನ್ನ ಮಗಳಿಗೆ ಅಜ್ಜಿಯ ಅವಶ್ಯಕತೆಯಿದೆ ಎಂದ. ಅಪ್ಪನಂತೂ ಜೀವನಪರ್ಯಂತ ಸ್ವಾರ್ಥಿಯಾಗಿಯೇ ಬದುಕಿದ, ನೀನೀಗ ಅಪ್ಪನ ಹೆಸರು ಹೇಳಿ ಬೇಳೆ ಬೇಯಿಸಿಕೊಳ್ಳುವುದು ತರವೇ ಎಂದು ನನಗೇ ವಾಪಸ್ಸು ಸವಾಲಿಟ್ಟ' ಎನ್ನುವ ಆಯಿಯ ಮಾತಿನಿಂದ ಅಣ್ಣನ ಹೊಸ ಮುಖ ನನ್ನೆದುರು ಅನಾವರಣಗೊಳ್ಳುತ್ತಲಿತ್ತು.

ನನ್ನ ಮದುವೆಯ ಹೊರತಾಗಿಯೂ ಆಯಿಗೆ ಬೇರೆಯದೇ ಆದ ಸಮಸ್ಯೆಗಳಿರಬಹುದು ಎಂಬ ಅರಿವು ಇಲ್ಲಿಯವರೆಗೆ ನನಗಿರಲೇ ಇಲ್ಲ.

ಅಣ್ಣನೆಂಬ ಅತೃಪ್ತ ಜೀವಿ ಅಪ್ಪ ಮಾಡಿದ್ದು ಮಟ್ಟಿದ್ದು ಸಾಲದು ಎಂದು ಸಂಸಾರ ಸಮೇತ

